ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 : ಜೂನ್ 4, 2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ<br>ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಪರಿಸರ ದಿನಾಚರಣೆ<br>ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ<br><br>ಉದ್ಘಾಟನೆ:<br><br>ನ್ಯಾ: ಸುಬ್ರೋ ಕಮಲ್ ಮುಖರ್ಜಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಮುಖ್ಯಸ್ಥರು<br><br>ಉಪಸ್ಥಿತಿ:<br>ನ್ಯಾ: ಎನ್.ಕೆ. ಪಾಟೀಲ್<br>ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯಾಧೀಶರು | 05–06–2015<br>ಶುಕ್ರವಾರ<br>ಬೆಳಿಗ್ಗೆ<br>9–00 ಗಂಟೆಗೆ | ಕಬ್ಬನ್ ಪಾರ್ಕ್<br>ಬೆಂಗಳೂರು |

| | | | |
|---|---|---|---|
| ೨ | ವಿಶ್ವ ಪರಿಸರ ದಿನಾಚರಣೆ ಹಾಗೂ ರಾಜ್ಯ ಪರಿಸರ ಪ್ರಶಸ್ತಿ ಪ್ರದಾನ ಸಮಾರಂಭ:<br><u>ಉದ್ಘಾಟನೆ ಮತ್ತು ಪ್ರಶಸ್ತಿ ಪ್ರದಾನ:</u><br>ಸಿದ್ದರಾಮಯ್ಯ,<br>ಮುಖ್ಯ ಮಂತ್ರಿಗಳು<br><u>ವಿಶೇಷ ಆಹ್ವಾನಿತರು:</u><br>ಡಿ.ವಿ. ಸದಾನಂದ ಗೌಡ,<br>ಕೇಂದ್ರ ಕಾನೂನು ಸಚಿವರು.<br>ಅನಂತಕುಮಾರ್,<br>ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು<br><u>ಪ್ರಶಸ್ತಿ ಪ್ರದಾನ:</u><br>ಬಿ. ರಮಾನಾಥ ರೈ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು. | **05–06–2015**<br>ಶುಕ್ರವಾರ<br>ಬೆಳಿಗ್ಗೆ<br>**10–00** ಗಂಟೆಗೆ | ಕಂಠೀರವ ಒಳಾಂಗಣ ಕ್ರೀಡಾಂಗಣ, ಬೆಂಗಳೂರು. |
| ೩ | ಬೆಂಗಳೂರು ವಿಶ್ವವಿದ್ಯಾನಿಲಯ ಪರಿಸರ ಮೇಳ:<br><u>ಉದ್ಘಾಟನೆ:</u><br>ಭರತ್‌ಲಾಲ್ ಮೀನಾ,<br>ಪ್ರಧಾನ ಕಾರ್ಯದರ್ಶಿಗಳು,<br>ಉನ್ನತ ಶಿಕ್ಷಣ ಇಲಾಖೆ.<br><u>ಅಧ್ಯಕ್ಷತೆ:</u><br>ಪ್ರೊ. ಬಿ. ತಿಮ್ಮೇಗೌಡ,<br>ಕುಲಪತಿಗಳು,<br>ಬೆಂಗಳೂರು ವಿಶ್ವ ವಿದ್ಯಾನಿಲಯ | **05–06–2015**<br>ಶುಕ್ರವಾರ<br>ಬೆಳಿಗ್ಗೆ<br>**10–00** ಗಂಟೆಗೆ | ಪ್ರೊ. ಕೆ. ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಬೆಂಗಳೂರು ವಿಶ್ವ ವಿದ್ಯಾನಿಲಯ, ಜೆ.ಬಿ. ಕ್ಯಾಂಪಸ್, ಬೆಂಗಳೂರು. |
| 4 | **Travelling Exhibition "Radiations Around Us" Inauguration by: Dr. Nagaiah N. Professor, Department of Physics, Bangalore University** | **05–06–2015**<br>**Friday**<br>**at**<br>**11-00 AM** | **Auditorium, Visveswaraya Industrial and Technological Museum, Kasturba Road, Bangalore – 560 001** |
| **5** | **Convocation**<br>**National Institute of Fashion Technology**<br><br>**Chief Guest:**<br>**Prof Dr. A.H. Rajasab,** | **05-06-2015**<br>**Friday**<br>**11.00 a.m.** | **St. Johns Auditorium, Koramangala Bangalore** |

| | | | |
|---|---|---|---|
| | **Hon'ble Vice Chancellor**<br>**Tumkur University**<br>**Guest of Honour:**<br>**Mr. Sileshi Lemma**<br>**Director General**<br>**Ethiopian Textile Industry Development Institute**<br>**Adis Ababa** | | |
| 6 | ಚಲನಚಿತ್ರ ನಿರ್ದೇಶಕ ದಿ. ಪುಟ್ಟಣ್ಣ ಕಣಗಾಲ್ ಸವಿನೆನಪು:<br>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಕರ್ನಾಟಕ ಚಲನಚಿತ್ರ ಅಕಾಡೆಮಿ.<br>ಉಪಸ್ಥಿತಿ:<br>ಆರ್. ರೋಷನ್ ಬೇಗ್,<br>ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು.<br>ಡಾ. ಅಂಬರೀಷ್,<br>ವಸತಿ ಸಚಿವರು<br>ಡಾ. ಎನ್. ನಾಗಾಂಬಿಕಾದೇವಿ,<br>ಪ್ರಧಾನ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ.<br>ಥಾಮಸ್ ಡಿಸೋಜ,<br>ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಬೆಂಗಳೂರು. | **05–06–2015**<br>ಶುಕ್ರವಾರ<br>ಸಂಜೆ<br>**6–00** ಗಂಟೆಗೆ | ಸುಲೋಚನಾ ಸಭಾಂಗಣ, ವಾರ್ತಾಸೌಧ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಂ. **17,** ಭಗವಾನ್ ಮಹಾವೀರ್ ರಸ್ತೆ, ಬೆಂಗಳೂರು. |
| 7 | **Static Display and Fashion Show**<br>**National Institute of Fashion Technology**<br><br>**Chief Guest:**<br>**Sri Bharat Lal Meena,**<br>**Principal Secretary,**<br>**Higher Education** | **05-06-2015**<br>**Friday**<br>**6-30 p.m.** | **St. Johns Auditorium,**<br>**Koramangala**<br>**Bangalore** |

**ನಿರ್ದೇಶಕರ ಪರವಾಗಿ**

**<u>ಪತ್ರಿಕಾ ಪ್ರಕಟಣೆ</u>**

# ಬೆಂಗಳೂರು ನಗರ ಸುಗಮ ರಸ್ತೆ ಸಂಚಾರಕ್ಕೆ ರಾಜ್ಯ ಸರ್ಕಾರದಿಂದ ಹಲವು ಯೋಜನೆ

**ಸಚಿವ ಆರ್. ರೋಷನ್ ಬೇಗ್**

**ಬೆಂಗಳೂರು, ಜೂನ್ 4 (ಕರ್ನಾಟಕ ವಾರ್ತೆ)**

ಬೆಂಗಳೂರು ಮಹಾನಗರದಲ್ಲಿ ವಾಹನ ಸಂಚಾರ ದಟ್ಟಣೆ ಕಡಿಮೆ ಮಾಡಲು ಹಾಗೂ ಮೆಟ್ರೋ ರೈಲು ನಿಲ್ದಾಣದ ನಡುವೆ ಸಂಪರ್ಕ ಕಲ್ಪಿಸುವ ಲೈಟ್ ರ್‍ಯಾಪಿಡ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್ (ಎಲ್‌ಆರ್‌ಟಿಎಸ್) ಹೆಸರಿನ ನೂನತ ಮಿನಿ ರೈಲ್ವೆ ಸೇವೆಯನ್ನು ಆರಂಭಿಸಲು ರಾಜ್ಯ ಸರ್ಕಾರ ಒಲವು ಹೊಂದಿದೆ.

ಬೆಂಗಳೂರು ನಗರದ 40 ಕಿ.ಮಿ. ವ್ಯಾಪ್ತಿಯಲ್ಲಿ ಮೆಟ್ರೋ ಮೊದಲ ಹಂತ, ಎರಡನೇ ಹಂತ ಹಾಗೂ ಮೂರನೇ ಹಂತಕಕ್ಕೂ ಅನ್ವಯವಾಗುವಂತೆ ಎಲ್‌ಆರ್‌ಟಿಎಸ್ ಸೇವೆಯನ್ನು ಕೈಗೆತ್ತಿಕೊಳ್ಳುವ ಸಂಬಂಧ ವಿಸ್ತೃತ ಯೋಜನಾ ವರದಿ (ಡಿಪಿಆರ್) ಯನ್ನು ರಾಜ್ಯ ಸರ್ಕಾರ ಸಿದ್ಧಪಡಿಸಿದೆ ಎಂದು ರಾಜ್ಯ ಮೂಲ ಸೌಲಭ್ಯ ಅಭಿವೃದ್ಧಿ ವಾರ್ತಾ ಹಾಗೂ ಹಜ್ ಖಾತೆ ಸಚಿವ ಆರ್. ರೋಷನ್ ಬೇಗ್ ಅವರು ಪತ್ರಕರ್ತರಿಗೆ ತಿಳಿಸಿದರು.

ಚೀನಾದ ಶಾಂಗ್‌ಡಾಂಗ್ ಇಂಟರ್ ನ್ಯಾಷನಲ್ ಸಂಸ್ಥೆ ರಾಜ್ಯದಲ್ಲಿ ಎಕ್ಸ್‌ಪ್ರೆಸ್ ಹೈವೆ, ಎಲಿವೇಟೆಡ್ ಹೈವೆ, ಮೇಲ್ಸೇತುವೆ, ರಸ್ತೆ ನಿರ್ಮಾಣ ಸೇರಿದಂತೆ ಮತ್ತಿತರ ವಿಷಯಗಳಲ್ಲಿ ಪಾಲುದಾರಿಕೆ ಹೊಂದುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚೆ ನಡೆಸಿದ ಬಳಿಕ ವಿವರ ನೀಡಿದ ಸಚಿವರು ಈಗಿರುವ ಮೆಟ್ರೋ ರೈಲ್ವೆ ನಿಲ್ದಾಣಗಳಿಗೆ ಸಂಪರ್ಕ ಸರಿಯಾಗಿಲ್ಲ ಎನ್ನುವ ಕಾರಣಕ್ಕೆ ಪ್ರಯಾಣಿಕರ ಸಂಖ್ಯೆ ಕಡಿಮೆ ಇದೆ. ಇದನ್ನು ಮನಗಂಡು ಮೆಟ್ರೋ ರೈಲ್ವೇ ಸೇವೆಯನ್ನು ಎಲ್ಲರೂ ಬಳಸುವಂತಾಗಲು ಹಾಗೂ ಮಹಾನಗರದಲ್ಲಿ ವಾಹನ ಸಂಚಾರ ದಟ್ಟಣೆ ಕಡಿಮೆ ಮಾಡಲು ಅನುಕೂಲವಾಗುಂತೆ ಎಲ್‌ಆರ್‌ಟಿಎಸ್ ಯೋಜನೆ ಕೈಗೆತ್ತಿಕೊಳ್ಳಲು ಯೋಜನಾ ವರದಿ ಸಿದ್ದಗೊಂಡಿದೆ ಎಂದು ಹೇಳಿದರು.

ಬೆಂಗಳೂರು ಮೈಸೂರು ನಡುವಣ ಚತುಷ್ಪಥ ಎಕ್ಸ್‌ಪ್ರೆಸ್ ಹೆದ್ದಾರಿ ನಿರ್ಮಾಣಕ್ಕೆ ಸುಮಾರು 6,000 ಕೋಟಿ ರೂ.ಗಳ ಅಂದಾಜು ವೆಚ್ಚವಾಗಲಿದ್ದು ಈ ನಿಟ್ಟಿನಲ್ಲಿ ಈಗಾಗಲೇ ಯೋಜನಾ ವರದಿ ಸಿದ್ಧಪಡಿಸಲಾಗಿದೆ. ಅಲ್ಲದೆ, ಹೆಬ್ಬಾಳದಿಂದ ಕೇಂದ್ರ ರೇಷ್ಮೆ ಮಂಡಳಿವರೆಗಿನ 16 ಕಿ.ಮಿ. ಕೆ.ಆರ್. ಪುರಂ ನಿಂದ ಗೊರಗುಂಟೆಪಾಳ್ಯದವರೆಗೆ 21 ಕಿ.ಮಿ. ಹಾಗೂ ಜ್ಞಾನಭಾರತಿಯಿಂದ ವೈಟ್‌ಫೀಲ್ಡ್‌ವರೆಗಿನ 27 ಕಿ.ಮಿ. ಹೊಸ ಕಾರಿಡಾರ್ ರಸ್ತೆಗಳನ್ನು ನಿರ್ಮಿಸಲು ಸಹಾ ಯೋಜನೆ ಸಿದ್ದಗೊಂಡಿದೆ ಎಂದು ಸಚಿವರು *ಈ ಸಂದರ್ಭದಲ್ಲಿ ತಿಳಿಸಿದರು.*

## ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಾಗಿ, ಕಾನೂನಿಗೆ ತಿದ್ದುಪಡಿ ತರುವುದು ಅವಶ್ಯಕ – ವಿ.ಎಸ್. ಉಗ್ರಪ್ಪ

ಬೆಂಗಳೂರು, ಜೂನ್ 4 (ಕರ್ನಾಟಕ ವಾರ್ತೆ)

ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುವ ಅತ್ಯಾಚಾರ ಹಾಗೂ ದೌರ್ಜನ್ಯಗಳನ್ನು ತಡೆಗಟ್ಟಲು ಕಾನೂನಿಗೆ ತಿದ್ದುಪಡಿ ತರುವುದು ಅವಶ್ಯಕವಾಗಿದೆ ಎಂದು ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದ ತಜ್ಞರ ಸಮಿತಿಯ ಅಧ್ಯಕ್ಷರಾದ ಶ್ರೀ ವಿ.ಎಸ್. ಉಗ್ರಪ್ಪ ಅವರು ಅಭಿಪ್ರಾಯಪಟ್ಟರು.

ವಿಧಾನಸೌಧದ ಕೊಠಡಿ ಸಂಖ್ಯೆ 338 ರಲ್ಲಿ ಇಂದು ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದ ತಜ್ಞರ ಸಮಿತಿಯ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರ ಆದೇಶದಂತೆ ಸರ್ಕಾರ ನನಗೆ ಈ ಜವಾಬ್ದಾರಿ ವಹಿಸಿದೆ. ಸದರಿ ಸಮಿತಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕೆಲಸಮಾಡಿ ಅನುಭವಿ ಹೊಂದಿರುವ 40 ಮಂದಿ ತಜ್ಞರು, ಪರಿಣಿತರು ಸದಸ್ಯರಿದ್ದಾರೆ. ನಾವೆಲ್ಲ ಒಟ್ಟಿಗೆ ಸೇರಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟಲು ಯಾವ ರೀತಿಯ ಕ್ರಮ ಕೈಗೊಳ್ಳಬಹುದು ಎಂಬುದರ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ತಿಳಿಸಿದರು.

ರಾಜ್ಯದಲ್ಲಿ ಸುಮಾರು 3.5 ಕೋಟಿ ಮಹಿಳೆಯರಿದ್ದಾರೆ. ಅವರೆಲ್ಲರ ರಕ್ಷಣೆ ಮತ್ತು ಅವರ ಮೇಲೆ ದೌರ್ಜನ್ಯ ತಡೆಗಟ್ಟುವ ಸಂಬಂಧ ಸಮಿತಿಯ ಸದಸ್ಯರೊಂದಿಗೆ ಜಿಲ್ಲಾವಾರು ಪ್ರವಾಸ ಕೈಗೊಂಡು ಸ್ಥಳೀಯ ತಜ್ಞರು ಹಿರಿಯರು ಹಾಗೂ ಶೋಷಣೆಗೆ ಒಳಗಾದವರನ್ನು ಭೇಟಿಮಾಡಿ ಮಾಹಿತಿ ಸಂಗ್ರಹಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದ ಅಧ್ಯಕ್ಷರು ಕೆಲವು ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರು ಇಂದಿಗೂ ಹಲವು ಬಗೆಯ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂದರು.

ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳನ್ನು ಬೇಗ ಬಗೆಹರಿಸಿ ಅವರಿಗೆ ನ್ಯಾಯ ಒದಗಿಸುವ ದೃಷ್ಟಿಯಿಂದ ತ್ವರಿತ ಗತಿಯಲ್ಲಿ ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಸುವಂತ ಸ್ಥಿತಿ ನಿರ್ಮಾಣವಾಗಬೇಕಾಗಿದೆ ಎಂದು ಎಸ್.ವಿ. ಉಗ್ರಪ್ಪ ಅವರು ಅಭಿಪ್ರಾಯಪಟ್ಟರು. ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯ ತಡೆಗೆ ಸಮಿತಿಯು ಉತ್ತಮವಾಗಿ ಕೆಲಸ ನಿರ್ವಹಿಸಿ ಸರ್ಕಾರಕ್ಕೆ ಆದಷ್ಟು ಬೇಗ ವರದಿ ನೀಡಲಾಗುವುದು ಎಂದರು.

ಸಮಿತಿಯ ಸದಸ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.

ಪಹೊ:ಕೆಪಿಪಿ:ಬಾಬು:ಜಿಪಿಆರ್.

## ಕೃತಿ ಸರಬರಾಜಿಗೆ ಅವಧಿ ವಿಸ್ತರಣೆ

ಬೆಂಗಳೂರು, ಜೂನ್ 4 (ಕರ್ನಾಟಕ ವಾರ್ತೆ)

ಕನ್ನಡ ಪುಸ್ತಕ ಪ್ರಾಧಿಕಾರವು 2010ನೇ ಸಾಲಿನಲ್ಲಿ ಪ್ರಥಮಾವೃತ್ತಿಯಾಗಿ ಮುದ್ರಣಗೊಂಡ ಕನ್ನಡ ಪುಸ್ತಕಗಳನ್ನು ಪ್ರಾಧಿಕಾರದ ಸಗಟು ಖರೀದಿ ಯೋಜನೆಯಡಿ ಖರೀದಿಸಲು ಆಯ್ಕೆ ಮಾಡಿದ್ದು, ಕೃತಿಗಳ ಲೇಖಕರು / ಪ್ರಕಾಶಕರಿಗೆ ಪ್ರಕಟಿತ ಕೃತಿಗಳನ್ನು ಸರಬರಾಜು ಮಾಡಲು ಜೂನ್ 10 ರವರೆಗೆ ಅವಧಿ ವಿಸ್ತರಿಸಿದೆ.

ಕೃತಿಗಳನ್ನು ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಮೊದಲನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು ಇವರಿಗೆ ಸಕಾಲದಲ್ಲಿ ಸಲ್ಲಿಸಲು ಸೂಚಿಸಿದೆ. ನಿಗದಿತ ಅವಧಿ ಮುಗಿದ ನಂತರ ಕೃತಿಗಳನ್ನು ಸ್ವೀಕರಿಸಲಾಗುವುದಿಲ್ಲವೆಂದು ಪ್ರಾಧಿಕಾರದ ಆಡಳಿತಾಧಿಕಾರಿ ಮಹದೇವಯ್ಯ ತಿಳಿಸಿದ್ದಾರೆ.

ಪಹೊ:ಬಾಬು:ಜಿಪಿಆರ್.

# ಮುಂಬಡ್ತಿ

**ಬೆಂಗಳೂರು, ಜೂನ್ 4 (ಕರ್ನಾಟಕ ವಾರ್ತೆ)**

**ರಾಜ್ಯ ಕಾನೂನು ಸಚಿವರ ಆಪ್ತ ಕಾರ್ಯದರ್ಶಿ ಎಂ. ಆರ್. ಸೋಮಶೇಖರಪ್ಪ ಹಾಗೂ ರಾಜ್ಯ ಲೋಕೋಪಯೋಗಿ ಸಚಿವರ ಆಪ್ತ ಕಾರ್ಯದರ್ಶಿ ಸಿ. ಎಂ. ರಾಜೇಂದ್ರ ಅವರುಗಳಿಗೆ ಕೆ.ಎ.ಎಸ್. ಸೀನಿಯರ್ ಸೂಪರ್ ಟೈಮ್ ಸ್ಕೇಲ್ ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡಲಾಗಿದೆ.**

ಪಹೊ:ಬಾಬು:ಜಿಪಿಆರ್.

# ವೀಡಿಯೋಚಿತ್ರಣ ತರಬೇತಿ ಶಿಬಿರ

**ಬೆಂಗಳೂರು, ಜೂನ್ 4 (ಕರ್ನಾಟಕ ವಾರ್ತೆ)**

**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಯುವಕ ಯುವತಿಯರಿಗಾಗಿ ಸ್ವಯಂ ಉದ್ಯೋಗ ಒದಗಿಸಿಕೊಡುವ ನಿಟ್ಟಿನಲ್ಲಿ "ವೀಡಿಯೋಚಿತ್ರಣ ತರಬೇತಿ ಶಿಬಿರ" ವನ್ನು ದಿನಾಂಕ: 22-06-2015 ರಿಂದ 01-07-2015 ರವರೆಗೆ ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಯವನಿಕಾ ಸಭಾಂಗಣದಲ್ಲಿ ಏರ್ಪಡಿಸಿದೆ.**

**ಆಸಕ್ತ ಯುವಕ/ಯುವತಿಯರು ತಮ್ಮ ಜನ್ಮ ದಿನಾಂಕದ ದಾಖಲೆಯೊಂದಿಗೆ (ಎಸ್.ಎಸ್.ಎಲ್.ಸಿ./ಅಂಕಪಟ್ಟಿ) ದಿನಾಂಕ 20-06-2015 ರ ಒಳಗಾಗಿ ಸಹಾಯಕ ನಿರ್ದೇಶಕರು, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು -1, ಇವರಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ 080 – 22214911. ಕಚೇರಿ ವೇಳೆಯಲ್ಲಿ ಸಂಪರ್ಕಿಸುವುದು.**

ಪಹೊ:ಬಾಬು:ಜಿಪಿಆರ್.